# ಆರ್.ಟಿ.ಇ. ದಾಖಲಾತಿ ಪೋಷಕರಿಗೆ ಸ್ಪಷ್ಟೀಕರಣ

# Clarification to RTE Admitted Parents

ದಿನಾಂಕ : ಡಿಸೆಂಬರ್ 2012 ಸಾಮಾನ್ಯ ಪ್ರಶ್ನೆ ಮತ್ತು ಅವುಗಳಿಗೆ ಉತ್ತರಗಳು ಪತ್ರದಲ್ಲಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು ಆಧಾರಿತ

## ಭಾಗ – 01

**12. ಪ್ರಶ್ನೆ : ಶಿಕ್ಷಣ ಹಕ್ಕು ಕಾಯ್ದೆ ಅನ್ವಯ ಶಾಲೆಗೆ ಸೇರಿಸಿದ ಮಕ್ಕಳಿಗೆ ಉಚಿತ ಸಮವಸ್ತ್ರ, ಪಠ್ಯ ಪುಸ್ತಕಗಳನ್ನು ಸಂಬಂಧಿಸಿದ ಶಾಲೆಯಲ್ಲಿ ನೀಡುತ್ತಾರೆಯೇ?**

**ಉತ್ತರ** : ಆ ಶಾಲೆಯಲ್ಲಿ ಮಕ್ಕಳಿಗೆ ಉಚಿತ ಪಠ್ಯ ಪುಸ್ತಕ ಸಮವಸ್ತ್ರಗಳನ್ನು ನೀಡುವ ಪರಿಪಾಠ ಇದ್ದಲ್ಲಿ ಅದೇ ಪರಿಪಾಠದಂತೆ ಆರ್.ಟಿ.ಇ. ಅಡಿಯಲ್ಲಿ ದಾಖಲಾದ ಮಕ್ಕಳಿಗೂ ಉಚಿತವಾಗಿ ನೀಡಬೇಕು. ಒಂದು ವೇಳೆ ಆಡಳಿತ ಮಂಡಳಿ ಪಠ್ಯಪುಸ್ತಕ, ಸಮವಸ್ತ್ರದ ಖರ್ಚನ್ನು ಶಾಲೆಯಒಟ್ಟು ವೆಚ್ಚದಲ್ಲಿ ಸೇರಿಸಿದ್ದರೆ, ಆರ್.ಟಿ.ಇ.ಅಡಿಯಲ್ಲಿ ದಾಖಲಾದ ಮಕ್ಕಳಿಗೂ ಸಹ ಉಚಿತವಾಗಿ ನೀಡಬೇಕಾಗುತ್ತದೆ.

Since this management is not providing free books, free uniform etc it is clear that the RTE Students parents must provide this to respective wards and to co-operate for educational Activities.

ಇದರಂತೆ ನಮ್ಮ ಶಾಲಾ ಆಡಳಿತ ಮಂಡಳಿಯು ಶಾಲೆಗೆ ದಾಖಲಾತಿಯಾಗುವ ಯಾವುದೇ ಮಕ್ಕಳಿಗೆ ಶಾಲಾ ಸಮವಸ್ತ್ರ, ಪಠ್ಯಪುಸ್ತಕ ಇತ್ಯಾದಿ ಉಚಿತವಾಗಿ ನೀಡುವ ಪರಿಪಾಠವಿಲ್ಲದ ಹಿನ್ನೆಲೆಯಲ್ಲಿ ಆರ್.ಟಿ.ಇ. ದಾಖಲಾತಿ ಮಕ್ಕಳಿಗೆ ಪೋಷಕರೇ ಇವೆಲ್ಲವನ್ನು ಒದಗಿಸಿ ತಮ್ಮ ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಕರಿಸಬೇಕಾಗಿ ತಿಳಿಸಲಾಗಿದೆ.

## ಭಾಗ – 02

**10. ಪ್ರಶ್ನೆ : ಆವರ್ತಕ ವೆಚ್ಚಗಳು ಅಂದರೆ ಯಾವುವು?**

**ಉತ್ತರ** : ಶಿಕ್ಷಕರ ವೇತನ, ಶಿಕ್ಷಕೇತರ ಸಿಬ್ಬಂದಿಯ ವೇತನ, ಸಾದಿಲ್ವಾರು ಖರ್ಚು, ಕಟ್ಟಡ ಬಾಡಿಗೆ (ಬಾಡಿಗೆ ಕಟ್ಟಡವಾಗಿದ್ದಲ್ಲಿ), ಕಟ್ಟಡ ದುರಸ್ತಿ, ಮಕ್ಕಳಿಗೆ ನೀಡಲಾಗುವ ಸಮವಸ್ತ್ರ, ಪಠ್ಯ ಪುಸ್ತಕ, ಗ್ರಂಥಾಲಯ ಪುಸ್ತಕ ಖರೀದಿ, ಪ್ರಯೋಗಾಲಯದಲ್ಲಿ ಬಳಸಲಾಗುವ ಕಚ್ಚಾವಸ್ತುಗಳ ಖರೀದಿ, ಕ್ರೀಡಾ ಸಾಮಗ್ರಿಗಳ ಖರೀದಿ ಇತ್ಯಾದಿಗಳು, ಮಕ್ಕಳ ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗಾಗಿ ಮಾಡಲಾದ ವೆಚ್ಚಗಳು ಆವರ್ತಕ ವೆಚ್ಚದಲ್ಲಿ ಸೇರುತ್ತವೆ.

As per this clarification the details mentioned above does not include the Expenditure of Books, School uniforms etc while reimbursing the RTE amount, it is very clear that the respective parents should provide this in time.

ಆರ್.ಟಿ.ಇ. ದಾಖಲಾತಿ ವಿದ್ಯಾರ್ಥಿಗಳಿಗೆ ನೀಡುವ ಮರುಪಾವತಿ ಹಣದಲ್ಲಿ ಶಾಲಾ ಪಠ್ಯ ಪುಸ್ತಕ, ಶಾಲಾ ಸಮವಸ್ತ್ರ ವೆಚ್ಚ, ಇತ್ಯಾದಿಗಳಿಗೆ ಮೇಲಿನ ಉತ್ತರದ ವಿವರದಲ್ಲಿ ಸೇರಿಸಿಲ್ಲದ ಹಿನ್ನೆಲೆಯಲ್ಲಿ ಇವುಗಳನ್ನು ಪೋಷಕರೆ ಒದಗಿಸಬೇಕಾಗಿದೆ ಎಂಬುದನ್ನು ತಿಳಿಯುವುದು.

---

ಮೇಲಿನ ಆಯುಕ್ತರ ಸುತ್ತೋಲೆ ಸಂಖ್ಯೆ ಸಶಿಅ/ಶಿಹಕೋ/ಸಿ.ಬಿ.ಎಸ್.ಸಿ/30/2013-14 ದಿನಾಂಕ : 13-03-2014 ಸುತ್ತೋಲೆ ವಿಷಯ : ಶಿಕ್ಷಣ ಹಕ್ಕು ಕಾಯ್ದೆಅಡಿ ಪ್ರವೇಶ ಪಡೆದ ಮಕ್ಕಳಿಂದ ಶುಲ್ಕ ವಸೂಲಾತಿ ನಿಷೇಧ ಎಂಬುದರ ಭಾಗಂಶ : ಕೊನೆ ಖಂಡಿಕೆ.

ಆದ್ದರಿಂದ ಶಿಕ್ಷಣ ಹಕ್ಕು ಕಾಯ್ದೆ ಅಡಿ ಪ್ರವೇಶ ಪಡೆದ ಮಕ್ಕಳಿಗೆ ನೃತ್ಯ, ಸಂಗೀತ, ಕರಾಟೆ, ಈಜು ಮುಂತಾದ ಪಠ್ಯೇತರ ಚಟುವಟಿಕೆಗಳ ಶುಲ್ಕವನ್ನು ಕಡ್ಡಾಯ ಮಾಡುವಂತಿಲ್ಲ. ಮಗು ಮತ್ತು ಪೋಷಕರು ವೈಯುಕ್ತಿಕವಾಗಿ ಇಚ್ಛೆ ಪಟ್ಟಲ್ಲಿ ಮಾತ್ರ ಅಂತಹ ಒಂದು ಚಟುವಟಿಕೆಯ ಶುಲ್ಕವನ್ನು ವಸೂಲು ಮಾಡಬಹುದು. ಆದರೆ ಶಿಕ್ಷಣ ಹಕ್ಕು ನಿಯಮಗಳು 2012ರ ನಿಯಮ 7(2)ರಲ್ಲಿ ನಮೂದಿಸಿರುವ ಸೌಲಭ್ಯಗಳಿಗೆ ಶುಲ್ಕ ವಸೂಲು ಮಾಡುವಂತಿಲ್ಲ. ಆದ ಕಾರಣ ಆಡಳಿತ ಮಂಡಳಿಗಳು, ಕ್ಷೇತ್ರಶಿಕ್ಷಣಾಧಿಕಾರಿಗಳು ಶಿಕ್ಷಣ ಹಕ್ಕು ಕಾಯ್ದೆ ಮತ್ತು ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ತಿಳಿಸಿದೆ.

Additional Education such as computer, Abacus, Spoken English Classes etc., are taught in our Institution. If RTE Students Parents is interested to join their wards they have to pay separate amount which is not compulsory.

ನಮ್ಮ ಶಾಲೆಯಲ್ಲಿ ಹೆಚ್ಚಿನ ಕಲಿಕೆಯಾದ ಕಂಪ್ಯೂಟರ್, ಅಬಾಕಸ್, ಆಂಗ್ಲ ಸಂಭಾಷಣೆ ತರಗತಿ ಇತ್ಯಾದಿ ಸೌಲಭ್ಯ ಪಡೆಯಬೇಕಾದಲ್ಲಿ ಆರ್.ಟಿ.ಇ. ದಾಖಲಾತಿ ವಿದ್ಯಾರ್ಥಿಗಳ ಪೋಷಕರು ಇದಕ್ಕೆ ಮಾತ್ರ ಶುಲ್ಕವನ್ನು ಪಾವತಿಸಿ ಸೌಲಭ್ಯವನ್ನು ತಮ್ಮ ಮಕ್ಕಳಿಗೆ ಒದಗಿಸಿಕೊಳ್ಳಬಹುದು. ಇದು ಕಡ್ಡಾಯವಾಗಿರುವುದಿಲ್ಲ.